ಶಿಕ್ಷಣದಿಂದ ಶ್ರೇಷ್ಠತೆ

**ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)**

**ಜಯಲಕ್ಷ್ಮೀಪುರಂ, ಮೈಸೂರು – 570 012**
**ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ**
**ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು**

---

ದಿನಾಂಕ 05.01.2020

# ರಾಷ್ಟ್ರೀಯ ಸೇವಾ ಯೋಜನೆ ಶಿಬಿರದ ಉದ್ಘಾಟನೆ




ಮೈಸೂರು, ಜನವರಿ 5 – "ವಿಜ್ಞಾನ ಮತ್ತು ವೈಜ್ಞಾನಿಕ ಮನೋ ಭಾವದೆಡೆಗೆ ಯುವಜನತೆ" ಎಂಬ ಶೀರ್ಷಿಕೆಯಡಿಯಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈಸೂರು ತಾಲ್ಲೂಕು ಬರಡನಪುರ ಗ್ರಾಮದಲ್ಲಿ ಒಂದು ವಾರದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶಿಬಿರವನ್ನು ಆಯೋಜಿಸಿದೆ. ಶಿಬಿರದ ಉದ್ಘಾಟನೆಯನ್ನು ಖ್ಯಾತ ಜಾನಪದ ವಿದ್ವಾಂಸ ಹಾಗೂ ಗಾಯಕ ಮತ್ತು ಮಾಜಿ ರಂಗಾಯಣದ ನಿರ್ದೇಶಕರಾದ ಶ್ರೀ ಹೆಚ್. ಜನಾರ್ದನ (ಜನ್ನಿ) ಅವರು **"ರಾಗಿ ಬೀಸುವ ಕಲ್ಲಿನಿಂದ ರಾಗಿ ಬೀಸುವ ಮುಖಾಂತರ"** ವಿನೂತನವಾಗಿ ಶಿಬಿರವನ್ನು ಉದ್ಘಾಟಿಸಿದರು.




ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಶಿಬಿರವು ಗಾಂಧೀಜಿ ಕಂಡ ಕನಸು, ಹಳ್ಳಿಗಳ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಲು ಮತ್ತು ಹಳ್ಳಿಗರಿಗೆ ತಿಳುವಳಿಕೆ ಹಾಗೂ ಅರಿವು ಮೂಡಿಸುವ ಮಾರ್ಗಸೂತ್ರವನ್ನು ವಿದ್ಯಾರ್ಥಿಗಳು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಮಹಾಜನ ಕಾಲೇಜು ಹಮ್ಮಿಕೊಂಡಿರುವ ಶಿಬಿರವು ಉಪಯುಕ್ತವಾಗಿದೆ. ಶಿಬಿರಾರ್ಥಿಗಳು ಗ್ರಾಮದ ಏಳಿಗೆಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಬಹಳ ಪ್ರಯೋಜನಕಾರಿಯಾಗಿದೆ. ಹಾಗೆಯೇ ಇಂದಿನ ಜಾಗತೀಕರಣ ಹಾಗೂ ಕಂಪ್ಯೂಟರೀಕರಣ ಯುಗದಲ್ಲಿ ಹಳ್ಳಿಗಳ ಏಳಿಗೆಗಾಗಿ ಸರ್ಕಾರ ಯೋಜನೆಗಳನ್ನು ರೂಪಿಸಬೇಕಾಗಿದೆ. ಈಗಿರುವ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸಬೇಕಾಗಿದೆ, ಇದಕ್ಕಾಗಿ ಯುವಜನತೆ ಗ್ರಾಮವಾಸ್ತವ್ಯದ ಮೂಲಕ ಹಳ್ಳಿ ಜನತೆಯ ಕಷ್ಟ, ಕಾರ್ಪಣ್ಯ ಹಾಗೂ ಬದುಕನ್ನು ಅರಿತು, ಗ್ರಾಮಗಳ ನವ ನಿರ್ಮಾಣ ಕಟ್ಟುವ ಕನಸನ್ನು ನನಸಾಗಬೇಕಾಗಿದೆ ಎಂದರು.



ಮುಂದುವರಿದು ಮಾತನಾಡುತ್ತಾ, ವಿದ್ಯಾರ್ಥಿಗಳು ಗ್ರಾಮೀಣ ದಿನನಿತ್ಯದ ಬದುಕಿನ ಆಗು–ಹೋಗುಗಳನ್ನು,, ಅವರ ಜನಪದ ತತ್ತ್ವ, ಹಬ್ಬ, ಜಾತ್ರೆ, ಆಚಾರ, ವಿಚಾರ ಮತ್ತು ನಂಬಿಕೆಗಳನ್ನು ರೂಢಿಸಿಕೊಂಡಿರುವ ಜೀವನ ಶೈಲಿಯನ್ನು ತಿಳಿಯಲು ಗ್ರಾಮಸ್ಥರ ಜೊತೆಯಲ್ಲಿ ಒಡನಾಟ ಅಗತ್ಯ ಎಂದರಲ್ಲದೆ, ದೇಶ ಕಟ್ಟುವ ನಿಟ್ಟಿನಲ್ಲಿ ಗ್ರಾಮಗಳ ಪಾತ್ರವನ್ನು ತಿಳಿಸುತ್ತಾ, ವಿದ್ಯಾರ್ಥಿಗಳು ಎನ್.ಎಸ್.ಎಸ್‌ನ ಶಿಬಿರದಿಂದ ಗ್ರಾಮಗಳ ಮೌಢ್ಯವನ್ನು ತೊಲಗಿಸಲು, ಗ್ರಾಮ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಅಲ್ಲಮ ಪ್ರಭು ಹೇಳಿದಂತೆ 'ಅರಿವೆ ಗುರು' ಎಂದು ಅರಿವು ಮೂಡಿಸಲು ಈ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅತ್ಯಗತ್ಯವಾದುದೆಂದು ಕಿವಿಮಾತು ಹೇಳಿದರು.

ಕುವೆಂಪುರವರು ಮಾತುಗಳನ್ನು ಸ್ಮರಿಸುತ್ತಾ 'ಮಗು ಹುಟ್ಟುವಾಗ ವಿಶ್ವಮಾನವನಾಗಿ ಬೆಳಯುತ್ತಾ ಅಲ್ಪಮಾನವ ನಾಗುತ್ತಿದ್ದಾನೆ' ಎಂದು ಎಚ್ಚರಿಸಿದರು. ಗ್ರಾಮಗಳಲ್ಲಿ ನಗರಗಳಂತೆ ನಾನತ್ವ ಬಿಟ್ಟು ಎಲ್ಲರೂ ಒಟ್ಟಾಗಿ, ಒಗ್ಗೂಡಿ ಜೀವಿಸುತ್ತಿರುವುದು, ಗ್ರಾಮಗಳಲ್ಲಿ ಎಲ್ಲರು ಜಗುಲಿಯಲ್ಲಿ ಕುಳಿತು ಚರ್ಚೆಗಳನ್ನು ನಡೆಸಿ ಗ್ರಾಮಗಳು ಸಂಸ್ಕೃತಿಯ ಉಳಿವಿಗೆ ಮುಖ್ಯ ಪಾತ್ರವಹಿಸುತ್ತದೆ ಎಂದರು. ಶಿಶುನಾಳ ಶರೀಫರ ಗೀತೆಗಳನ್ನು ಹಾಡಿ ಭಾರತದ ಸಂಸ್ಕೃತಿಯ ಉಳಿವಿಗೆ ಗ್ರಾಮಗಳ ಪ್ರಾತಿನಿಧ್ಯತೆಯನ್ನು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮುರವರು ಮಾತನಾಡಿ, ಎನ್‌ಎಸ್‌ಎಸ್ ಎಂಬುದು ಸೇವಾ ಮನೋಭಾವ ಹೊಂದಿರುವ ಘಟಕ. ಇದಕ್ಕೆ ವಿದ್ಯಾರ್ಥಿಗಳು ಸ್ವಇಚ್ಛೆಯಿಂದ ಸೇರಿ, ಶಿಬಿರದಲ್ಲಿ ಪಾಲ್ಗೊಂಡು, ಗ್ರಾಮಸ್ಥರಿಗೆ, ಅನಕ್ಷರಸ್ಥರನ್ನು ತಿಳಿಹೇಳಿ, ಅರಿವು ಮೂಡಿಸುವ ಮುಖೇನ ಅಕ್ಷರಸ್ಥರನ್ನಾಗಿ ಮಾಡುವ ಹೊಣೆ ಯುವಪೀಳಿಗೆಯ ಮೇಲಿದೆ. ನಮ್ಮ ಸಮಾಜದ ಏಳಿಗೆ ಗ್ರಾಮೀಣ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ. ಶಿಬಿರಾರ್ಥಿಗಳು ಇದನ್ನು ಅರಿತು, ಹೆಚ್ಚಿನ ಜವಾಬ್ದಾರಿಯಿಂದ ಪ್ರೀತಿ ಇಟ್ಟು, ಪ್ರಾಮಾಣಿಕವಾಗಿ ಸೇವೆ ಮಾಡಲು ಪಣತೊಡಬೇಕು. ಪ್ರೀತಿ ಇಟ್ಟು ಮಾಡುವ ಯಾವ ಕೆಲಸವು ಶ್ರಮವಾಗಿ ಕಾಣಿಸುವುದಿಲ್ಲ. ನೀವು ಮಾಡುವ ಶ್ರಮದಾನ ಹಳ್ಳಿಗಳ ಮತ್ತು ಹಳ್ಳಿಗಳ ಏಳಿಗೆಗಾಗಿ, ರಾಷ್ಟ್ರಕ್ಕಾಗಿ ಸಮರ್ಪಿತ ಎಂಬುದನ್ನು ತಿಳಿಯಬೇಕು. ಪ್ರಸ್ತಾವಿಕ ನುಡಿಗಳನ್ನಾಡಿ, ಶಿಬಿರದ ಮಹತ್ವವನ್ನು ತಿಳಿಸಿ, ಶುಭ ಕೋರಿದರು.

ಸಮಾರಂಭದಲ್ಲಿ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಶ್ರೀ ಎಲ್. ರವಿ ಅವರು ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಒಂದು ವಾರಗಳ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ನಿಮ್ಮ ಹಳ್ಳಿಯಲ್ಲಿ ಹಮ್ಮಿಕೊಂಡಿದ್ದಾರೆ. ಬಡಗನಪುರ ಗ್ರಾಮಸ್ಥರು ಶಿಬಿರಾರ್ಥಿಗಳಿಗೆ ಅನುಕೂಲ ಕಲ್ಪಿಸಿಕೊಟ್ಟಿರುವುದು ಸಂತೋಷದ ಸಂಗತಿ. ಹಾಗೆಯೇ ಶಿಬಿರದ ಯೋಜನೆಗಳಾದ ಗ್ರಾಮ ಸ್ವಚ್ಛತೆ, ನೈರ್ಮಲ್ಯ ಕಾಪಾಡುವುದು, ಪ್ಲಾಸ್ಟಿಕ್ ನಿರ್ಮೂಲನೆ. ಪರಿಸರ ಸಂರಕ್ಷಣೆ, ಗಿಡಗಳನ್ನು ನೆಡುವುದು, ದುಶ್ಚಟಗಳ ನಿವಾರಣೆ ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಬಡಗನಪುರ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.

ಮುಂದುವರಿದು ಮಾತನಾಡಿ, ನಮ್ಮ ಕಾಲೇಜಿನ ಎನ್‌ಎಸ್‌ಎಸ್ ಬಳಗವು ಇತರೆ ಸ್ವಯಂಸೇವಾ ಸಂಸ್ಥೆಗಳೊಂದಿಗೆ ಕೈಜೋಡಿಸಿ, ಹಳ್ಳಿಗರಿಗೆ ಅರಿವು ಮೂಡಿಸಲು ಅಗ್ನಿ ಅವಘಡ ಕುರಿತು ಪ್ರಾತ್ಯಕ್ಷಿಕೆ, ರಸ್ತೆ ಸುರಕ್ಷತೆ ಬಗ್ಗೆ ಮತ್ತು ಆರೋಗ್ಯ ಶಿಬಿರಗಳನ್ನು ಹಮ್ಮಿಕೊಂಡಿದ್ದಾರೆ, ಇವುಗಳ ಸದುಪಯೋಗವನ್ನು ಪಡೆದು, ನವ ಸಮಾಜದ ನಿರ್ಮಾಣಕ್ಕೆ ಕೈಜೋಡಿಸಿ ಎಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರಲ್ಲದೆ, ಶಿಬಿರಕ್ಕೆ ಶುಭಕೋರಿದರು.

ವೇದಿಕೆಯಲ್ಲಿ ಗ್ರಾಮದ ಮುಖಂಡರಾದ ಶ್ರೀ ನಂಜಪ್ಪ ಮತ್ತು ಶ್ರೀ ದೇವಪ್ಪ ರವರು, ಎಸ್. ಬಿ. ಆರ್. ಆರ್. ಮಹಾಜನ ಕಾಲೇಜಿನ ಭೂಗೋಳಶಾಸ್ತ್ರ ಸಹಾಯಕ ಪ್ರಾಧ್ಯಾಪಕರು ಶ್ರೀ ದೊಡ್ಡಅರಸಯ್ಯರವರು, ಸಹ ಶಿಬಿರಾದಿಕಾರಿಗಳಾದ ರೇಷ್ಮಾ, ರಾಘವೇಂದ್ರ ಮತ್ತು ನಿರಂಜನ್‌ರವರು ಉಪಸ್ಥಿತರಿದ್ದರು.

ಶಿಬಿರಾರ್ಥಿಗಳು ಎನ್‌ಎಸ್‌ಎಸ್ ಗೀತೆ ಹಾಡಿದರು. ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ–1 ರ ಕಾರ್ಯಕ್ರಮಾಧಿಕಾರಿಗಳಾದ ಡಾ. ಧರ್ಮೇಶ ಎ.ಜಿ. ಸ್ವಾಗತ ಕೋರಿ, ಅತಿಥಿಗಳನ್ನು ಪರಿಚಯಿಸಿದರು. ರಾಷ್ಟ್ರೀಯ ಸೇವಾ ಯೋಜನೆ ಘಟಕ–2 ರ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಕೇಶವಮೂರ್ತಿ ವಂದನಾರ್ಪಣೆ ನೆರವೇರಿಸಿದರು. ಪತ್ರಿಕೋದ್ಯಮ ವಿದ್ಯಾರ್ಥಿನಿ ಕು. ದಿವ್ಯ ಎಸ್. ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಬೋಧಕ ವರ್ಗ, ಬಡಗನಪುರ ಹಳ್ಳಿಯ ಗ್ರಾಮಸ್ಥರು, ಹಾಗೂ ಸ್ವಯಂ ಸೇವಕರು ಮತ್ತು ಸೇವಕಿಯರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ನಂತರ ಹಿರಿಯ ವಿದ್ಯಾರ್ಥಿಗಳಿಂದ ಕಂಸಾಳೆ ನೃತ್ಯ ಮತ್ತು ಎನ್.ಎಸ್.ಎಸ್ ಸ್ವಯಂಸೇವಕರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

**ಪ್ರಾಂಶುಪಾಲರು**